ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ2119/2018

ಚಾಸಾಃ 1 ಪ್ರಾಸಾಃ1

ದಿನಾಂಕಃ 07-02-2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜೀವನ್ ಶೆಟ್ಟಿ |
| ತಂದೆಯ ಹೆಸರು | : | ದಿವಾಕರ ಶೆಟ್ಟಿ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಹೊಟೇಲ್ |
| ವಾಸ ಸ್ಥಳ | : | ಮಲ್ಯಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಚಾಸಾ-2 ರಿಂದ 4 ರವರು ನನ್ನ ಸ್ನೇಹಿತರು. ಮೃತ ಕಿರಣ್ ಶೆಟ್ಟಿ ಮತ್ತು ದೀಕ್ಷಿತ್ ಶೆಟ್ಟಿ ನನ್ನ ಸ್ನೇಹಿತರು. ದಿಃ 15-07-2018 ರಂದು ನಾನು , ಚಾಸಾ-2 ರಿಂದ 4, ಮೃತ ಕಿರಣ್ ಶೆಟ್ಟಿರವರು ಸ್ಯಾಂಟ್ರೊ ಕೆಎ-20-ಎನ್-2213 ಕಾರಿನಲ್ಲಿ ತೊಂಬಟು ಫಾಲ್ಸ್ ಗೆ ಹೋಗಿ ಬರುತ್ತಿದ್ದು, ಮೃತ ಕಿರಣ್ ಶೆಟ್ಟಿ ತಮ್ಮ ಕಾರನ್ನು ಚಲಾಯಿಸುತ್ತಿದ್ದರು. ಸಂಜೆ 5-20 ಗಂಟೆ ಸಮಯಕ್ಕೆ ನೆಲ್ಲಿಕಟ್ಟೆಯ ಕ್ರಾಸ್ ಬಳಿ ಕುಂದಾಪುರದಿಂದ ನೆಲ್ಲಿಕಟ್ಟೆ ಕಡೆಗೆ ಬರುತ್ತಿದ್ದ ಬಸ್ಸು ಏಕಾಏಕಿ ಬಂದು ನಮ್ಮ ಕಾರಿಗೆ ಗುದ್ದಿರುತ್ತದೆ, ಯಾವ ಬಸ್ಸು ಎಂದು ಗೊತ್ತಾಗಲಿಲ್ಲ. ನನಗೆ ಪ್ರಜ್ಞೆ ತಪ್ಪಿ ಹೋಗಿದ್ದು, ಚಿನ್ಮಯಿ ಆಸ್ಪತ್ರೆಯಲ್ಲಿ ದಾಖಲಿಸಿರುತ್ತಾರೆ. ಕಿರಣ್ ಶೆಟ್ಟಿ ಮತ್ತು ಚಾಸಾ-3 ರವರನ್ನು ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಿದ್ದರು. ದೀಕ್ಷಿತ್ ಶೆಟ್ಟಿರವರನ್ನು ಕುಂದಾಪುರದ ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದು ಆತ ಮೃತಪಟ್ಟಿರುವುದಾಗಿ ತಿಳಿಯಿತು.

ನಂತರ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ದಾಖಲಿಸಿರುತ್ತಾರೆ. ಸದ್ರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ. ಆ ದಿನ ಬಸ್ಸು ಹಠತ್ತಾಗಿ ಬಂದು ಅಪಘಾತ ಮಾಡಿದ್ದರಿಂದ ಬಸ್ಸಿನ ಚಾಲಕ ಯಾರು ಎಂದು ಗುರುತು ಹಿಡಿಯಲು ಸಾಧ್ಯವಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ಆ ದಿನ ದುರ್ಗಾಂಬಾ ಮೋಟಾರ್ ಬಸ್ಸು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಕಾರಿಗೆ ಎದುರುಗಡೆಯಿಂದ ಡಿಕ್ಕಿ ಹೊಡೆದಿರುತ್ತದೆ ಎಂದರೆ ಸಾಕ್ಷಿಯು ಬಸ್ಸು ಡಿಕ್ಕಿ ಹೊಡೆದಿರುತ್ತದೆ ಆದರೆ ಯಾವ ಬಸ್ಸು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಬಸ್ಸು ಡಿಕ್ಕಿ ಹೊಡೆದ ಪರಿಣಾಮ ನಮ್ಮ ಕಾರು ರಸ್ತೆಯ ಎಡಬದಿಯ ಚರಂಡಿ ತೋಡಿಗೆ ಬಿದ್ದಿರುತ್ತದೆ ಎಂದರೆ ಸರಿ. ಅಪಘಾತದಿಂದ ನನ್ನ ತಲೆಗೆ, ಸೊಂಟಕ್ಕೆ ಹಾಗೂ ಮೈಕೈಗೆ ನೋವಾಗಿದ್ದು, ಕಾರು ಚಲಾಯಿಸುತ್ತಿದ್ದ ಕಿರಣ್ ಶೆಟ್ಟಿ ಗಂಭೀರ ರಕ್ತಗಾಯವಾಗಿದ್ದು, ಕಾರಿನ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ದೀಕ್ಷಿತ್ ಶೆಟ್ಟಿಗೆ ತಲೆಗೆ ಗಂಭೀರ ರಕ್ತಗಾಯವಾಗಿದ್ದು, ಮನೀಶ್ ಶೆಟ್ಟಿ ಮತ್ತು ಅರುಣ್ ಶೆಟ್ಟಿರವರಿಗೆ ತಲೆಗೆ ನೋವಾಗಿರುತ್ತದೆ, ಆಗ ನಮ್ಮನ್ನು ಸ್ಥಳೀಯರು ಸೇರಿ ಆರೈಕೆ ಮಾಡಿರುತ್ತಾರೆ ಎಂದರೆ ಸರಿ.

ಬಸ್ಸಿನ ನಂಬರ್ ಕೆಎ-20-ಬಿ-3040 ಆಗಿದ್ದು, ಚಾಲಕನ ಹೆಸರು ಭರತೇಶ್ ಪಟ್ಕರ್ ಎಂದು ತಿಳಿಯಿತು ಎಂದು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬಸ್ಸಿನ ಚಾಲಕನ ಅತೀ ವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣವಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಪೊಲೀಸರಿಗೆ ದಿಃ 16-07-2018 ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಮರುಹೇಳಿಕೆಯಲ್ಲಿ ಬಸ್ಸಿನ ಚಾಲಕ ಭರತೇಶ ಪಟ್ಕರ್ ರವರನ್ನು ನೋಡಿರುವುದಾಗಿ ಬಸ್ಸಿನ ನಂಬರ್ ಕೆಎ-20-ಬಿ-3040 ಎಂದು ಹೇಳಿರುತ್ತೇನೆ ಎಂದರೆ ನೆನಪಿಲ್ಲ. ಆರೋಪಿಗೆ ಸಹಾಯ ಮಾಡಲು ಆರೋಪಿ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಎಂ ಎಚ್ ರವರಿಂದಃ</u>**

ಆಸ್ಪತ್ರೆಗೆ ಹೋದ ನಂತರ ಸುಮಾರು ಅರ್ಧ ಗಂಟೆ ಅಥವಾ 1 ಗಂಟೆ ನಂತರ ಪ್ರಜ್ಞೆ ಬಂದಿರುತ್ತದೆ. ನಿಪಿ-1 ನನ್ನ ಕೈಬರಹದಲ್ಲಿ ಇಲ್ಲ ಎಂದರೆ ಸರಿ. ನಾನು ಚಿನ್ಮಯಿ ಆಸ್ಪತ್ರೆಗೆ ಎಷ್ಟು ಹೊತ್ತಿಗೆ ಬಂದಿರುತ್ತೇನೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಸಿದ್ದಾಪುರ ಕಡೆಗೆ ದುರ್ಗಾಂಬಾ ಮೋಟಾರು ಸಂಸ್ಥೆಯ ಬಸ್ಸನ್ನು ಅದರ ಚಾಲಕ ಅತೀ ವೇಗ ಹಾಗೂ

ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಡಿಕ್ಕಿ ಹೊಡೆದ ರಭಸಕ್ಕೆ ನಮ್ಮ ಕಾರು ರಸ್ತೆಯ ಎಡಬದಿಯ ಚರಂಡಿ ತೋಡಿಗೆ ಹೋಗಿ ಬಿದ್ದಿರುತ್ತದೆ ಎಂಬ ವಿಚಾರವನ್ನು ಪೊಲೀಸರು ಹೇಳಿರುತ್ತಾರೆ.

ನಾನು ಪೊಲೀಸರಿಗೆ ನಾನು ಮತ್ತು ನನ್ನ ಸ್ನೇಹಿತರು ಕಾರಿನಲ್ಲಿ ಬರುತ್ತಿದ್ದು, ಎದುರುಗಡೆಯಿಂದ ಬಸ್ಸು ಬಂದು ಡಿಕ್ಕಿ ಹೊಡೆದಿರುತ್ತದೆ ನನಗೆ ಪ್ರಜ್ಞೆ ತಪ್ಪಿರುತ್ತದೆ ಎಂದು ಹೇಳಿರುತ್ತೇನೆ. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಅಪಘಾತವಾದ ಸ್ಥಳದಿಂದ ಸುಮಾರು 20-30 ಅಡಿ ದೂರದಲ್ಲಿ ಪೂರ್ವದ ಕಡೆ ಅಪಾಯಕಾರಿ ತಿರುವು ಇದೆ ಎಂದರೆ ಸರಿ. ನಾವು ತಿರುವು ದಾಟಿ ಬಂದ ಕೂಡಲೇ ಅಪಘಾತವಾಗಿರುತ್ತದೆ. ಸಿದ್ದಾಪುರದಿಂದ ಕುಂದಾಪುರ ಕಡೆಗೆ ಬರುವಾಗ ಸದ್ರಿ ತಿರುವು ಇರುವ ಕಾರಣ ಎದುರುಗಡೆ ಬರುವ ವಾಹನ ಕಾಣುವುದಿಲ್ಲ ಎಂದರೆ ಸರಿ. ಸದ್ರಿ ತಿರುವು ಸಿದ್ದಾಪುರದಿಂದ ಕುಂದಾಪುರ ಕಡೆಗೆ ಬರುವಾಗ ರಸ್ತೆಯ ಎಡಬದಿಗೆ ಇದೆ ಎಂದರೆ ಸರಿ.

ನನಗೆ ಕಾರನ್ನು ಚಲಾಯಿಸಲು ಬರುತ್ತದೆ. ತಿರುವು ಇರುವ ಕಾರಣ ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಹೋಗುವಾಗ ವಾಹನ ಸ್ವಲ್ಪ ಬಲಭಾಗಕ್ಕೆ ಬರುತ್ತದೆ ಎಂದರೆ ಸರಿ. ಮೃತ ಕಿರಣ್ ಶೆಟ್ಟಿರವರು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿದೆ ಎಂದು ನನಗೆ ನಂತರ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ತಿರುವು ಇದ್ದ ಕಾರಣ ಅಪಘಾತ ಪೂರ್ವದಲ್ಲಿ ಬಸ್ಸು ಬಂದಿದ್ದನ್ನು ನಾನು ನೋಡಿಲ್ಲ ಎಂದರೆ ಸರಿ. ಬಸ್ಸಿನ ಚಾಲಕನ ಅತೀ ವೇಗ ಹಾಗೂ ಅಜಾಗರೂಕತೆಯಿಂ ಅಪಘಾತವಾಗಿಲ್ಲ ಎಂದರೆ ನನಗ ಗೊತ್ತಿಲ್ಲ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**